# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001

ದೂ:+91-80-2226 0017;+91-80-2226 7470;+91-80-2226 1047 ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.org

ಸಂಖ್ಯೆ:SHQ/ORG.1/Letter/2026-27-787 ದಿನಾಂಕ:28.07.2026

ಮಾನ್ಯರೆ,

ವಿಷಯ:- ದಿನಾಂಕ: 15.08.2026ರಂದು **"79ನೇ ಸ್ವಾತಂತ್ರ್ಯ ದಿನಾಚರಣೆ"**ಯನ್ನು ಆಚರಿಸುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಎಲ್ಲಾ ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್, ಶಿಕ್ಷಕರುಗಳು, ಪದಾಧಿಕಾರಿಗಳು ಸಂಪೂರ್ಣ ಸಮವಸ್ತ್ರದಲ್ಲಿ ಅವರವರ ದಳ ಹಂತದಿಂದ ಜಿಲ್ಲಾ ಹಂತದ ವರೆಗೆ ದಿನಾಂಕ: 15.08.2026ರಂದು **"79ನೇ ಸ್ವಾತಂತ್ರ್ಯ ದಿನಾಚರಣೆ"**ಯನ್ನು ಸಂಭ್ರಮದಿಂದ ಆಚರಿಸಲು ಕೋರಲಾಗಿದೆ.

ಈ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ದಿನಾಂಕ: 8 ರಿಂದ 14ರ ವರೆಗೆ ಒಂದು ವಾರದದ್ಯಾಂತ್ಯ ದಳ ಹಂತದಲ್ಲಿ ಈ ಕೆಳಕಂಡ ಚಟುವಟಿಕೆ ಮತ್ತು ಕಾರ್ಯಕ್ರಮಗಳನ್ನು ಶಿಸ್ತಿನಿಂದ ಸಂಘಟಿಸಿ, ಆಚರಿಸಲು ಕೋರಲಾಗಿದೆ. ಇದಕ್ಕೆ ಸಂಬಂಧಪಟ್ಟ ವಿವರಗಳ ಆಕ್ಟಿವಿಟಿ ಪ್ಯಾಕ್ ಪೋಸ್ಟರ್‌ಗಳನ್ನು ಕಳುಹಿಸಲಾಗುವುದು.

- ಕಬ್ಸ್-ಬುಲ್‌ಬುಲ್ಸ್ ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳು ಅವರವರ ಮನೆ ಮತ್ತು ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛಗೊಳಿಸಿ, ಮನೆ ಮನೆಗಳ ಮೇಲೆ ರಾಷ್ಟ್ರಧ್ವಜ ಹಾರಿಸುವುದು, ಇದಕ್ಕೆ ಅಗತ್ಯವಿರುವ ತಳಿರು ತೋರಣ, ಸ್ವಚ್ಛತೆ, ರಂಗೋಲಿ ಇತ್ಯಾದಿಗಳನ್ನು ಹಿಂದಿನ ದಿನ ರಾತ್ರಿ ಸಿದ್ಧತೆ ಮಾಡಿಕೊಂಡು ದಿನಾಂಕ: 15.08.2026ರಂದು ರಾಷ್ಟ್ರಧ್ವಜ ಹಾರಿಸುವುದು ಮತ್ತು ರಾಷ್ಟ್ರಧ್ವಜಕ್ಕೆ ವಂದನೆ ಸಲ್ಲಿಸಿ, ನಂತರ ಶಾಲೆ/ಕಾಲೇಜುಗಳಿಗೆ ತೆರಳುವುದು ಮತ್ತು ಅಗತ್ಯವಿರುವ ಕಛೇರಿ, ಶಾಲೆ, ಕಾಲೇಜುಗಳಲ್ಲಿ ಧ್ವಜವನ್ನು ಕಟ್ಟಲು ಸಹಾಯ ಮಾಡುವುದು.
- ಆಯಾಯ ಊರಿನ ಪ್ರಮುಖ ವೃತ್ತಗಳಲ್ಲಿರುವ ಗಣ್ಯರ/ಪ್ರಾಚೀನ ಸಂಸ್ಕೃತಿ ಚಿತ್ರಿಸುವ ಪ್ರತಿಮೆಗಳನ್ನು ಮತ್ತು ಸುತ್ತ-ಮುತ್ತಲಿನ ಪರಿಸರವನ್ನು ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್ ಹಾಗೂ ದಳನಾಯಕರುಗಳೊಂದಿಗೆ ಸ್ವಚ್ಛಗೊಳಿಸುವುದು ಮತ್ತು ಪ್ರತಿಮೆಯಲ್ಲಿ ಇರುವ ವ್ಯಕ್ತಿಯ ವಿಶಿಷ್ಠ ಸಾಧನೆ ಮತ್ತು ಅವರ/ಅದರ ಬಗ್ಗೆ ತಿಳಿದು, ಸಾರ್ವಜನಿಕರಲ್ಲಿ ಮತ್ತು ಮಕ್ಕಳಲ್ಲಿ ಜಾಗೃತಿಯನ್ನು ಮೂಡಿಸುವುದು.
- ದಳ ಹಂತ, ಸ್ಥಳೀಯ ಮತ್ತು ಜಿಲ್ಲಾ ಮಟ್ಟದಲ್ಲಿ ನಗರದ ಪ್ರಮುಖ ಬೀದಿಗಳಲ್ಲಿ ಪ್ರಭಾತ್‌ಭೇರಿ (ಮೆರವಣಿಗೆ) ನಡೆಸುವುದು. ಈ ಮೆರವಣಿಗೆಯಲ್ಲಿ ಬ್ಯಾಂಡ್ ವಾದನದೊಂದಿಗೆ ಮಕ್ಕಳು ಸಮವಸ್ತ್ರದಲ್ಲಿ ಮತ್ತು ರಾಷ್ಟ್ರ ನಾಯಕರ ವೇಷಭೂಷಣ, ದೇಶಭಕ್ತಿಯ ಘೋಷಣೆಗಳೊಂದಿಗೆ ಪ್ರಭಾತ್ ಬೇರಿಯನ್ನು ಸಂಘಟಿಸುವುದು.
- ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳು ಮನೆ ಹತ್ತಿರ ಇರುವ ಸ್ವಾತಂತ್ರ್ಯ ಹೋರಾಟಗಾರರನ್ನು ಭೇಟಿ ಮಾಡಿ, ಅವರುಗಳ ಅನುಭವಗಳನ್ನು ಸಂಗ್ರಹಿಸುವುದು.
- ಸ್ಥಳೀಯ & ಜಿಲ್ಲಾ ಸಂಸ್ಥೆಗಳಲ್ಲಿ ಧ್ವಜಾರೋಹಣ ನೆರವೇರಿಸುವುದು.
- ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಸ್ಕೌಟ್ಸ್-ಗೈಡ್ಸ್‌ಗಳಿಗೆ ಉತ್ತಮವಾಗಿ ಕವಾಯತು ತರಬೇತಿ ನೀಡಿ, ಸ್ವಾತಂತ್ರ್ಯ ದಿನಾಚರಣೆಯಂದು ಕವಾಯತುಗಳನ್ನು ಪ್ರದರ್ಶಿಸುವುದು.
- ನೃತ್ಯ, ವೇಷಭೂಷಣ, ರಾಷ್ಟ್ರೀಯ ಭಾವೈಕ್ಯತೆ ಮೂಡಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳ ಸಂಘಟಿಸಿ, ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿ, ಬಹುಮಾನಗಳನ್ನು ನೀಡಬಹುದಾಗಿದೆ.
- ಮೋಟರ್ ಸೈಕಲ್ ರ್‍ಯಾಲಿಯನ್ನು ಸಹ ಏರ್ಪಡಿಸುವುದು.
- ಸಮುದಾಯ ಸೇವಾ ಕಾರ್ಯಕ್ರಮಗಳನ್ನು ಸಂಘಟಿಸುವುದು.
- ವಿಶೇಷವಾಗಿ ಸ್ವಾತಂತ್ರ್ಯ ದಿನಾಚರಣೆಯ ಬಗ್ಗೆ ಪ್ರತಿ ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳು 2 ನಿಮಿಷ ಅವಧಿಯ ದೇಶಭಕ್ತಿಯ ಬಗ್ಗೆ ವಿಡಿಯೋದಲ್ಲಿ ಹಾಡುವುದು, ಕವನ ವಾಚನ, ನೃತ್ಯ, ಅನಿಸಿಕೆ/ಅಭಿಪ್ರಾಯ ತಿಳಿಸಿ, ವೀಡಿಯೊವನ್ನು ರಾಜ್ಯ ಸಂಸ್ಥೆಗೆ ಕಳುಹಿಸುವುದು.

ಮೇಲೆ ತಿಳಿಸಿರುವಂತೆ ತಾವು ಮತ್ತು ತಮ್ಮ ಜಿಲ್ಲಾ ಪದಾಧಿಕಾರಿಗಳು ಆದ್ಯ ಗಮನ ಹರಿಸಿ, ದಳ ಹಂತದಿಂದ ಜಿಲ್ಲಾ ಹಂತದ ವರೆಗೆ ಮಾಹಿತಿ ತಿಳಿಸಿ, **"79ನೇ ಸ್ವಾತಂತ್ರ್ಯ ದಿನಾಚರಣೆ"** ಮಾಡುವಲ್ಲಿ ಸೂಕ್ತ ಕ್ರಮ ವಹಿಸಲು ಕೋರಲಾಗಿದೆ.

ಸ್ಕೌಟ್-ಗೈಡ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಕೆ.ಗಂಗಪ್ಪಗೌಡ)
ರಾಜ್ಯ ಕಾರ್ಯದರ್ಶಿ

ಎಲ್ಲಾ ಜಿಲ್ಲಾ ಕಾರ್ಯದರ್ಶಿಯವರುಗಳಿಗೆ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
ಜಿಲ್ಲಾ ಸಂಸ್ಥೆ, ಕರ್ನಾಟಕ

**ಪ್ರತಿಯನ್ನು ಮಾಹಿತಿಗಾಗಿ:**

1. ಎಲ್ಲಾ ಜಿಲ್ಲಾ ಮುಖ್ಯ ಆಯುಕ್ತರು, ಭಾ.ಸ್ಕೌ&ಗೈ, ಕರ್ನಾಟಕ
2. ಎಲ್ಲಾ ಜಿಲ್ಲಾ ಆಯುಕ್ತರು(ಸ್ಕೌ/ಗೈ), ಭಾ.ಸ್ಕೌ&ಗೈ, ಕರ್ನಾಟಕ
3. ಎಲ್ಲಾ ಸ್ಥಳೀಯ ಸಂಸ್ಥೆಗಳ ಕಾರ್ಯದರ್ಶಿಗಳಿಗೆ, ಭಾ.ಸ್ಕೌ&ಗೈ, ಸಂಬಂಧಪಟ್ಟ ಸ್ಥಳೀಯ ಸಂಸ್ಥೆ
4. ಎಲ್ಲಾ ದಳನಾಯಕರುಗಳಿಗೆ, ಭಾ.ಸ್ಕೌ.&ಗೈ, ಸಂಬಂಧಪಟ್ಟವರಿಗೆ
5. ಎಎಸ್ಒಸಿ/ಡಿಒ/ಡಿಒಟಿ/ಎಸ್‌ಜಿವಿ/ಎಸ್‌ಜಿಎಗಳ ಸೂಕ್ತ ಕ್ರಮಕ್ಕಾಗಿ
6. ಕಛೇರಿ ಪ್ರತಿ

ರಾಜ್ಯ ಮುಖ್ಯ ಆಯುಕ್ತರಿಂದ
ಅನುಮೋದಿಸಲ್ಪಟ್ಟಿದೆ